ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **243/2020**

| | ಚಾಸಾಃ **6** | ಅಸಾಃ **4** |
|---|---|---|
| ಹೆಸರು | ಓದೇಶ | |
| ತಂದೆಯ ಹೆಸರು : | ಬೈರಯ್ಯ | |
| ವಯಸ್ಸುಃ | 36 ವರ್ಷ | |
| ಕೆಲಸಃ | ಕೂಲಿ | |
| ವಾಸಸ್ಥಳ | ಮಲ್ಲಾಪುರ ಗ್ರಾಮ | |

ದಿನಾಂಕಃ **19.03.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಸ್‌ಪಿಪಿ ರವರಿಂದ

ನಾನು ಪಧವೀದರನಾಗಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಚಾಸಾ-1, 3 ಮತ್ತು 5 ರವರು ಗೊತ್ತು. ಸಾಕ್ಷಿ ನಿಪಿ-3 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

ದಿ. 30.06.2020 ರಂದು ಆರೋಪಿಯ ಮನೆಯ ಮುಂಭಾಗ ಪೊಲೀಸರು ಬಂದು ಮಹಜರ್ ಮಾಡಿದ್ದು, ಆ ಸಮಯದಲ್ಲಿ ನಾನು ಮತ್ತು ಚಾಸಾ-3 ಮತ್ತು 5 ರವರು ಹಾಜರಿದ್ದೆವು. ಚಾಸಾ-1 ಮತ್ತು ಆರೋಪಿಯು ಗಲಾಟೆ ಮಾಡಿಕೊಂಡಿದ್ದು, ಆರೋಪಿಯು ಚಾಸಾ-1 ರವರಿಗೆ ಕತ್ತಿಯಿಂದ ಹಲ್ಲೆ ಮಾಡಿದ್ದರು ಆ ವಿಚಾರವಾಗಿ ಪೊಲೀಸರು ಮಹಜರ್ ಮಾಡಿದ್ದರು. ಚಾಸಾ-3 ರವರು ಪೊಲೀಸರಿಗೆ ಸ್ಥಳವನ್ನು ತೋರಿಸಿರುತ್ತಾರೆ. ಮಹಜರನ್ನು ಸಂಜೆ 4.00-5.00 ಗಂಟೆಯ ತನಕ ಮಾಡಿರುತ್ತಾರೆ. ಮಹಜರಿಗೆ ನನ್ನ ಜೊತೆ ಚಾಸಾ-3 ಮತ್ತು 5 ರವರು ಸಹ ಸಹಿ ಮಾಡಿರುತ್ತೇವೆ.

ಪೊಲೀಸರು ಮಹಜರ್ ಸಮಯದಲ್ಲಿ ಕತ್ತಿಯನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿ ಮುಮಾ-1 ಕತ್ತಿಯನ್ನು ನ್ಯಾಯಾಲಯದ

ಮುಂದೆ ನೋಡಿ ಗುರುತಿಸಿರುತ್ತಾರೆ. ಬಿಳಿ ಬಟ್ಟೆಯ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪೊಲೀಸರು ಪೊಟೋ ತೆಗೆದಿರುತ್ತಾರೆ. ಸಾಕ್ಷಿ ಪೊಟೋದಲ್ಲಿ ಮತ್ತು ನಿಪಿ-4 ರ ದೃಶ್ಯಾವಳಿಯಲ್ಲಿ ತನ್ನ ಮತ್ತು ಇತರರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ಪೊಲೀಸರು ಮತ್ತೆ ನಮ್ಮನ್ನು ಅರಸೀಕೆರೆ ಡಿವೈಎಸ್‌ಪಿ ಕಚೇರಿಗೆ ನನ್ನನ್ನು ಕರೆಸಿರುತ್ತಾರೆ. ನಾನು ಮತ್ತು ಚಾಸಾ-1 ಹಾಗೂ 5 ರವರು ಹೋಗಿರುತ್ತೇವೆ. ನಾವು ಹೋಗಿದ ದಿನಾಂಕ 11.07.2020 ರಂದು ಮದ್ಯಾಹ್ನ 11.00-11.45 ಗಂಟೆಯ ತನಕ ಪೊಲೀಸರು ಬಟ್ಟೆಯನ್ನು ಮಹಜರ್ ಮಾಡಿರುತ್ತಾರೆ. ಚಾಸಾ-1 ರವರು ಪೊಲೀಸರಿಗೆ ರಕ್ತಕಲೆ ಇರುವ ಬಟ್ಟೆಯನ್ನು ಹಾಜರುಪಡಿಸಿದರು. ಪೊಲೀಸರು ಅದನ್ನು ಅಮಾನತುಪಡಿಸಿಕೊಂಡು ಮಹಜರ್ ಮಾಡಿರುತ್ತಾರೆ.

ಸಾಕ್ಷಿ ನಿಪಿ-2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುಮಾ-2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಮಾ-2 ರ ಬಿಳಿ ಬಟ್ಟೆಗೆ ಅಂಟಿಸಿರುವ ಚೀಟಿಯಲ್ಲಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ನಿಪಿ-2 ರ ಮಹಜರಿಗೆ ನಾನು, ಚಾಸಾ-1 ಮತ್ತು 5 ರವರು ಸಹ ಸಹಿ ಮಾಡಿರುತ್ತೇವೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಸಿ ವಕೀಲರಿಂದಃ</u>

ಆರೋಪಿ ಪರ ಪಾಟೀ ಸವಾಲು ಮಾಡಲು ಸಮಯ ಕೇಳಿದ್ದು, ರೂ.500/- ಖರ್ಚಿನೊಂದಿಗೆ ಆದೇಶ ಮಾಡಿ ಸಮಯ ನೀಡಲಾಯಿತು.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪು.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ